ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 19-24
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ಎಮ್.ಎಸ್. ಸಿಂಧೂರ ಅವರ ಸಣ್ಣಕಥೆಗಳ ಅವಲೋಕನ

ಮಹಾಂತೇಶ ಸೀತಾರಾಮ ಕಾಂಬಳೆ[1] ಮತ್ತು ಡಾ. ಭೀಮಾಶಂಕರ ಜೋಷಿ[2]
ಸಂಶೋಧನಾ ವಿದ್ಯಾರ್ಥಿ[1], ಸಹಾಯಕ ಪ್ರಾಧ್ಯಾಪಕರು[2]
ಕನ್ನಡ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

Abstract:
ಹತ್ತನೇ ಶತಮಾನದ ಆರಂಭದಲ್ಲಿ ಸಣ್ಣಕಥೆಗಳು ಕನ್ನಡದಲ್ಲಿ ಹುಟ್ಟಿಕೊಂಡಿವೆ. ಕನ್ನಡ ಕಥಾ ಸಂಪ್ರದಾಯ ಬೆಳೆದು ಬಂದಿದ್ದು ಮೊದಲು ಜನಪದರಲ್ಲಿ. ಜನಪದರು ತಮ್ಮ ಕಥೆಗಳನ್ನು ಮೌಖಿಕವಾಗಿ ಉಳಿಸಿಕೊಂಡ ಬಂದಿದ್ದರು. ಕಥೆಗಳು ಮುಂದೆ ಬರಹ ರೂಪಕ್ಕೆ ಇಳಿದದ್ದು ಮಾತ್ರ ಕ್ರಿ.ಶ. 920ರಲ್ಲಿ. ಶಿವಕೋಟಾಚಾರ್ಯರು ಕ್ರಿ.ಶ.920 ರಲ್ಲಿ ಬರೆದ 19 ಕಥೆಗಳ ಸಂಕಲನ ವಡ್ಡಾರಾಧನೆ, ನಂತರ ದುರ್ಗಸಿಂಹನ ಪಂಚತಂತ್ರ, ನಯಸೇನನ ಧರ್ಮಾಮೃತ, ಲಕ್ಷ್ಮೀಶನ ಜೈಮಿನಿ ಭಾರತ ಹಾಗೂ ಹೆಳವನಕಟ್ಟೆ ಗಿರಿಯಮ್ಮನ ಕಥೆಗಳವರಗೆ ಕಥಾ ಸಾಹಿತ್ಯ ಪರಂಪರೆ ಬೆಳೆದು ಬಂದಿದೆ. ಪ್ರಸ್ತುತ ಲೇಖನದಲ್ಲಿ ಎಮ್.ಎಸ್.ಸಿಂಧೂರ ಅವರ ಸಣ್ಣಕಥೆಗಳನ್ನು ಅವಲೋಕನ ಮಾಡಲಾಗಿದೆ.

Keywords: *ಕನ್ನಡ ಸಾಹಿತ್ಯ, ಎಮ್.ಎಸ್.ಸಿಂಧೂರ, ಸಣ್ಣ ಕಥೆಗಳು, ಉರುಳುವ ಕಲ್ಲು, ಕಥೆ ಹೇಳುವೆ ಎನ್ನ, ನಾ ರಾಧೇಯ.*

ಪೀಠಿಕೆ

ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ 20ನೇ ಶತಮಾನದ ಆರಂಭದಲ್ಲಿ ಕನ್ನಡದ ಸಣ್ಣಕಥೆಗಳು ರಚಿತಗೊಂಡವು. ಪ್ರಾಚೀನ ಹಾಗೂ ಮೌಖಿಕ ಪರಂಪರೆಯ ಕೃತಿಗಳಲ್ಲಿ ಹರಿದು ಬರುತ್ತಿರುವ ಕಥನ ನಿರೂಪಣೆ ಆಧುನಿಕ ಕನ್ನಡ ಕಥಾ ಸಾಹಿತ್ಯಕ್ಕೆ ಸಹಜವಾಗಿ ಹೊಸ ಸೃಷ್ಟಿಗೆ ಕಾರಣವಾದವು. ನವೋದಯ ಕಾಲಘಟ್ಟದಲ್ಲಿ "ಪಂಜೇ ಮಂಗೇಶರಾಯರ ಸಣ್ಣಕಥೆಗಳ ಮೂಲಕ ಕಥಾ ಪರಂಪರೆ ಆರಂಭವಾಯಿತು. ಮೊದಲು ಪತ್ರಿಕೆಗಳಲ್ಲಿ ಪ್ರಕಟಗೊಂಡ ನಂತರ ಸಂಕಲನ ರೂಪದಲ್ಲಿ ಹೊರ ತಂದರು. 1900ರಲ್ಲಿ ಪ್ರಕಟವಾದ 'ನನ್ನ ಚಿಕ್ಕತಾಯಿ' ಕನ್ನಡದ ಮೊದಲ ಸಣ್ಣಕಥೆ ಎಂದು ಕರೆಯಲಾಗಿದೆ. ತದನಂತರದಲ್ಲಿ 'ನನ್ನ ಚಿಕ್ಕತಂದೆ', 'ಭಾರತ ಶ್ರವಣ', ಕಮಲಾಪುರದ ಹೋಟ್ಲಿನಲ್ಲಿ"[1] ಪ್ರಮುಖವಾಗಿವೆ. ನವೋದಯ ಸಾಹಿತ್ಯದಲ್ಲಿ ಶ್ರೀನಿವಾಸರರಿಂದಲೇ ಸಣ್ಣಕಥೆ ಒಂದು ಸಾಹಿತ್ಯ ಪ್ರಕಾರವಾಗಿ ಕನ್ನಡದಲ್ಲಿ ಬಳಕೆಗೆ ಬಂದಿತು. ನಂತರ ಕೆರೂರು ವಾಸುದೇವಾಚಾರ್ಯರು, ಎಂ.ಎನ್.ಕಾಮತರು, ಆನಂದ, ಪು.ತಿ.ನ, ಗೋರೂರು ರಾಮಸ್ವಾಮಿ ಅಯ್ಯಂಗಾರ, ಎಂ.ವೀ.ಸೀರಾತಾಮಯ್ಯ, ಎ.ಆರ್.ಕೃಷ್ಣಶಾಸ್ತ್ರಿ, ಕುವೆಂಪು, ಜೀಶಂಪ, ಮುಂತಾದವರು ಸಣ್ಣಕಥೆ ಸಾಹಿತ್ಯದಲ್ಲಿ ಕೇಳಿಬರುವ ಸಾಹಿತಿಗಳಾಗಿದ್ದಾರೆ. ಪ್ರಗತಿಶೀಲ ಕಾಲಘಟ್ಟದಲ್ಲಿ ಅ.ನ.ಕೃ, ಬಸವರಾಜ ಕಟ್ಟಿಮನಿ, ನಿರಂಜನ,

Please cite this article as: ಮಹಾಂತೇಶ ಸೀತಾರಾಮ ಕಾಂಬಳೆ ಮತ್ತು ಭೀಮಾಶಂಕರ ಜೋಷಿ. (2024). ಎಮ್.ಎಸ್.ಸಿಂಧೂರ ಅವರ ಸಣ್ಣಕಥೆಗಳ ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 19–24

ಚದುರಂಗರು ಪ್ರಮುಖರು. ನವ್ಯ ಕಾಲಘಟ್ಟದಲ್ಲಿ ರಾಮಚಂದ್ರ ಶರ್ಮ, ಚಿತ್ತಾಲರು, ಶಾಂತಿನಾಥ ದೇಸಾಯಿ, ಅನಂತಮೂರ್ತಿ, ಲಂಕೇಶ, ಸದಾಶಿವ, ರಾಘವೇಂದ್ರ ಖಾಸನೀಸ, ಶ್ರೀಕೃಷ್ಣ ಆಲನಹಳ್ಳಿ, ಪೂರ್ಣಚಂದ್ರ ತೇಜಸ್ವಿ, ವೀಣಾ ಶಾಂತೇಶ್ವರ ಪ್ರಮುಖರು. ದಲಿತ–ಬಂಡಾಯ ಕಾಲಘಟ್ಟದಲ್ಲಿ ದೇವನೂರ ಮಹಾದೇವ, ಕಾಳೇಗೌಡ ನಾಗವಾರ, ಚೆನ್ನಣ್ಣ ವಾಲೀಕಾರ, ಚಂದ್ರಶೇಖರ ಪಾಟೀಲರು ಪ್ರಮುಖರು.

ಹೊಸ ತಲೆಮಾರಿನ ಲೇಖಕರು ಇತ್ತೀಚಿನ ಜನ ಜೀವನ, ಮನೋಧರ್ಮ, ಕತೆಗಾರರ ಆಶಯ, ಕಲ್ಪನೆ, ಪ್ರತಿಭೆಗಳು ವೈವಿಧ್ಯಮಯ ಕಥೆಗಳು ಸೃಷ್ಟಿಗೆ ಕಾರಣವಾಗಿವೆ. ಇಂತಹ ವಿಷಯಗಳು ಇಟ್ಟುಕೊಂಡು ಪೀರ್‌ಭಾಷಾ, ವಿಕ್ರಮ ವಿಸಾಜಿ, ತಾರಿಣಿ ಶುಭದಾಯಿನಿ, ಅರವಿಂದ ಚೊಕ್ಕಾಡಿ, ವಿನಯಾ ಒಕ್ಕುಂದ, ರಮೇಶ ಅರೋಲಿ, ಸುನಂದಾ ಕಡೆಮನಿ ಪ್ರಮುಖರು. ಪ್ರಾಚೀನದಿಂದ ಹೊಸ ತಲೆಮಾರಿನವರಗೆ ಲೇಖಕರು ಕಥಾ ಪರಂಪರೆ ಮುಂದುವರಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ನವ್ಯ ಮತ್ತು ದಲಿತ–ಬಂಡಾಯ ಕಾಲಘಟ್ಟದಲ್ಲಿ ಬರುವ ಎಮ್.ಎಸ್.ಸಿಂಧೂರ ಅವರು ನಾಲ್ಕು ಕಥಾ ಸಂಕಲನಗಳನ್ನು ಹೊರ ತಂದಿದ್ದಾರೆ. ಇವರ ಮೊದಲ ಕಥಾ ಸಂಕಲನ 'ಹುಚ್ಚರ ರಾಜ್ಯ' ನಂತರದಲ್ಲಿ 1963ರಲ್ಲಿ 'ಉರುಳುವ ಕಲ್ಲು', 2007ರಲ್ಲಿ 'ನಾ ರಾಧೇಯ', 2017ರಲ್ಲಿ 'ಕಥೆ ಹೇಳುವೆ ಎನ್'ನ ಎಂಬ ಕಥೆಗಳು ಪ್ರಕಟಗೊಂಡವು. ಈ ಮೂರು ಕಥೆಗಳಲ್ಲಿ ಸಾಮಾಜಿಕ, ವೈಚಾರಿಕ, ನೈತಿಕ ಮೌಲ್ಯಗಳು ತುಂಬಿಕೊಂಡಿವೆ.

ಸಿಂಧೂರ ಅವರು ತಮ್ಮ ಕಥೆಗಳ ಆರಂಭದಲ್ಲಿ ಪ್ರಕೃತಿ ವರ್ಣನೆ ಹೆಚ್ಚಾಗಿದೆ. ಕೆಲವು ಕಥೆಗಳಲ್ಲಿ ನಿಸರ್ಗದ ವರ್ಣನೆ ದೀರ್ಘವಾದರೂ ಕಥೆಗೆ ಯಾವುದೇ ಬಾಧಕವಾಗದಂತೆ ಪೂರಕವಾಗಿವೆ. 'ಉರುಳುವ ಕಲ್ಲು' ಎಂಬ ಕಥಾ ಸಂಕಲನವೂ ಪ್ರಕೃತಿ ವರ್ಣನೆ ಮೂಲಕ ಕಥೆ ನಿರೂಪಣೆ ಸಾಗುತ್ತದೆ. ಕಥೆಯ ಮುನ್ನೋಟದ ಮೂಲಕ ಕಥೆಯ ಆಶಯವನ್ನು ವ್ಯಕ್ತಪಡಿಸುತ್ತಾರೆ. ಬದುಕಿನ ಹಾದಿ, ಮಾನವನ ಜೀವಾನುಭವ ಕುರಿತಾದ ಬರಹವು ಸಾಹಿತ್ಯದ ರಸಗಟ್ಟಿಯಂತ್ತಿದ್ದು, ಕಥೆಗಳು ಮಾರ್ಮಿಕವಾಗಿವೆ. ಪಂಚತಂತ್ರ ಕಥೆಗಳು ಹಾಗೂ ಈ ಸೋಪನ ನೀತಿಕಥೆಗಳನ್ನು ನೆನಪಿಗೆ ಬರುವಂತೆ ಲೇಖಕರು ಕಥೆಯನ್ನು ಕಟ್ಟುವರು. 'ಉರುಳುವ ಕಲ್ಲು' ಕಥಾ ಸಂಕಲನದಲ್ಲಿ ಮೂರು ಭಾಗವನ್ನು ಮಾಡಿಕೊಂಡಿದ್ದಾರೆ. 'ಉರುಳುವ ಕಲ್ಲು,' 'ಗುಂಡುಕಲ್ಲು,' 'ಫರಸಿಕಲ್ಲು' ಎಂಬ ಭಾಗದಲ್ಲಿ ಹಲವು ಕಥೆಗಳನ್ನು ಒಳಗೊಂಡಿವೆ. ಎಲ್ಲ ಕಥೆಗಳಲ್ಲಿ ಒಂದು ಕಥೆಯ ವಸ್ತುವಿನ ಮೂಲಕ ಇನ್ನೊಂದು ಕಥಾ ವಸ್ತು ನಿರ್ಮಾಣವಾಗುತ್ತದೆ. ಹಿಂದಿನ ಕಥೆಗೆ ಮುಂದಿನ ಕಥೆ ಪೂರಕವಾಗಿರುತ್ತದೆ. ಉರುಳುವ ಕಲ್ಲು ಕಥೆಗಳು ಜನಪದಕಾರರು ಹೇಳುವ ಕಟ್ಟು ಕಥೆಗಳಂತೆ ಕೂಡುತ್ತದೆ. ಕಥಾ ನಿರೂಪಣೆ ಸಾಗುತ್ತದೆ. ಹಾಗೂ ಕಥೆಯ ಕೊನೆಗೆ ಸಮಾಜಕ್ಕೆ ಒಳಿತಾಗುವ ಸಂದೇಶವನ್ನು ಕೊಡುತ್ತವೆ.

ಉರುಳುವ ಕಲ್ಲು ವಿಭಾಗದಲ್ಲಿ ವ್ಯಕ್ತಿಯ ವಿಷಯ ವಾಸನೆ, ದೈಹಿಕ ಹಾಗೂ ಮಾನಸಿಕ ದೌರ್ಬಲ್ಯ ಮತ್ತು ಬಡತನ ಹೀನಾಯ ಸ್ಥಿತಿಯನ್ನು ಕುರಿತು ಮಾತನಾಡುತ್ತದೆ. ಬಲಿಷ್ಠರ ಶೋಷಣೆ ಹಾಗೂ ಅವಕಾಶವಾದಿಗಳ ದ್ವಂದ್ವ ಬುದ್ಧಿ, ಜನರು ವಂಚನೆಗೆ ಹೇಗೆ ಬಲಿಯಾಗುತ್ತಾರೆ ಎಂಬುದನ್ನು ಚಿತ್ರಿಸುತ್ತದೆ. ಬಹುತೇಕ ಕಥೆಗಳು ಲುಪ್ತಶ್ಲೇಷಾಲಂಕಾರದಲ್ಲಿ ರಚಿತವಾಗಿವೆ. ಕೆಲವು ಕಥೆಗಳು ಸುಂದರ ಪ್ರತೀಕಗಳಿಂದ ಕೂಡಿವೆ. 'ಜ್ಯೋತಿ' ಎಂಬ ಕಥೆಯು ಅನುಭವದ ಮೂಲಕ ಹೆಣ್ಣಿನ ಮಹತ್ವ ತಿಳಿಸುತ್ತದೆ. ಸಂಸಾರವೆಂಬ ಸಾಗರದಲ್ಲಿ ಗಂಡು ಹೆಣ್ಣು ಎಂಬುವರು ಒಂದೇ ನ್ಯಾಣದ ಎರಡು ಮುಖಗಳು. ಇಬ್ಬರೂ ಕೂಡಿಕೊಂಡು ಜೀವನವನ್ನು ಸಾಗಿಸಬೇಕು ಇಲ್ಲವಾದರೆ ಸಂಸಾರವು ಸೂತ್ರವಿರದ ಗಾಳಿಪಟವಾಗುತ್ತದೆ. ಹೆಣ್ಣು ಒಂದು ಜ್ಯೋತಿಯಿದ್ದ ಹಾಗೆ ಅದು ಬೆಳಗಿದರೆ ಬೆಳಕು, ಉರಿದರೆ ಹೊಗೆ,

ಆರಿದರೆ ಕತ್ತಲೆ ಜೀವನದಲ್ಲಿ ತುಂಬಿಕೊಳ್ಳುವುದು. ಈ ಕಥೆಯಲ್ಲಿ ನಿರೂಪಕರ ಹಾಗೂ ಮುದಕನ ಪ್ರಾತವಿದೆ. ಶಿವಪುರ ಎಂಬ ಊರಿನ ಹಳ್ಳದ ಪಕ್ಕದಲ್ಲಿ ಒಂದು ಗುಡಿಸಲು ಆ ಗುಡಿಸಲ ಕಿಡಿಯಲ್ಲಿ ದೀಪವು ಲೇಖಕರಿಗೆ ಕಾಣುವುದು ಮತ್ತೊಂದು ದಿನ ಗುಡಿಸನಲ್ಲಿ ದೀಪ ನಂದಿ ಹೋಗುವುದು ಆ ಮುದಕನ ಹತ್ತಿರ ಬಂದು ನಿರೂಪಕ ಕೇಳಿದ್ದರೆ ಗುಡಿಸಲಲ್ಲಿನ ಬೆಳಕನ್ನು ಹೆಣ್ಣಿಗೆ ಹೋಲಿಕೆ ಮಾಡಿ ಕಥೆ ಮುಂದೆ ಸಾಗುವುದು.

'ಸಾಕಿದ ಕ್ರೌಂಚಗಳು' ಎಂಬ ಕಥೆಯಲ್ಲಿ ಬೇಟೆಗಾರ ಒಂದು ಕ್ರೌಂಚ ಪಕ್ಷಿಯನ್ನು ಸಾಕಿರುತ್ತಾನೆ ಇದರಿಂದ ಬೇಟೆಯಾಡುವಾಗ ಇದರ ಸುತ್ತ ಬಲೆ ನಿರ್ಮಿಸುತ್ತಾನೆ. ಇದರ ಧ್ವನಿ ಕೇಳಿ ಉಳಿದ ಕ್ರೌಂಚ ಪಕ್ಷಿಗಳು ಬಲೆಗೆ ಬೀಳುತ್ತವೆ ಈ ಕಥೆಯಲ್ಲಿ ಬೇಟೆಗಾರ ಸಾಕಿದ ಕ್ರೌಂಚ ಪಕ್ಷಿ ತನ್ನ ಕೃತಜ್ಞತೆಗಾಗಿ ಇಡೀ ಕುಲಕ್ಕೆ ಕಂಟಕವಾಗುವುದನ್ನು ವಿವರಿಸುತ್ತದೆ. ಸಾಕಿದವರ ಉಪಕಾರ ತೀರಿಸುವುದು ಅದರ ಕರ್ತವ್ಯ ಆದರೆ ತನ್ನ ಕುಲವನ್ನು ಸಮಾಜ ಘಾತುಕರ ಕಡೆ ನೀಡಬಾರದು. 'ಕೊಡಲಿ ಕಾವು ಕುಲಕ್ಕೆ ಮೂಲ' ಎಂಬ ಗಾದೆ ಮಾತಿನಂತೆ ತನ್ನ ಕುಲಕ್ಕೆ ತಾನೇ ಶತ್ರುವಾಗುವ, ಸಮಾಜದಲ್ಲಿ ಒಳಿತನ್ನು ಮಾಡದ ವ್ಯಕ್ತಿಯ ಮಾತನು ಕೇಳಿ ಇಡೀ ಸಮಾಜವನ್ನು ನಾಶಮಾಡಬಾರದೆಂದು ಈ ಕಥೆಯ ವಸ್ತುವಾಗಿದೆ. ಈ ಕಥೆಯಲ್ಲಿ ನಿರೂಪಕರು ಹಾಗೂ ಬೇಟೆಗಾರನ ನಡುವೆ ಕಥೆ ಸಾಗುವುದು.

'ಸುಮನ ವಿಹಾರಿ' ಕಥೆಯಲ್ಲಿ ಕಾಮಕ್ಕಾಗಿ ಹಪಿಹಪಿಸುವದು, ಜಾತಿ ವ್ಯವಸ್ಥೆ, ಗಂಡಿನಿಂದ ಹೆಣ್ಣಿಗೆ ಆಗುವ ಮೋಸ, ಸಿರಿವಂತರ ಹಣದ ಮದದಿಂದ ಬಡ ಹೆಣ್ಣುಗಳನ್ನು ಬಳಿಸಿಕೊಳ್ಳುವ ಪರಿಯನ್ನು ವಿವರಿಸುತ್ತದೆ. ಈ ಕಥೆಯು ನಿಸರ್ಗದಲ್ಲಿ ಬರುವ ಹೂಗಳಾದ ಮಲ್ಲಿಗೆ, ಸಂಪಿಗೆ, ಲಕ್ಕಿಯ ಹೂಗಳ ಪಾತ್ರ ಪ್ರಮುಖವಾಗಿವೆ. ಈ ಪಾತ್ರದ ಮೂಲಕ ಲಕ್ಕಿ ಹೂವನ್ನು ಇಂದಿನ ಸಮಾಜದಲ್ಲಿ ಕನಿಷ್ಠವಾಗಿ ಕೆಳವರ್ಗದ ಪ್ರತಿನಿಧಿಯಾಗಿ ನೋಡುತ್ತೇವೆ ಆದರೆ ಮಲ್ಲಿಗೆ, ಸಂಪಿಗೆ ಹೂಗಳು ಮೇಲ್ವರ್ಗದ ಪ್ರತಿನಿಧಿಯಾಗಿ ಕಾಣುತ್ತೇವೆ. ಪುರುಷನ ಪ್ರತಿನಿಧಿಯಾಗಿ ಜೇನು ನೊಣವು ಮಲ್ಲಿಗೆ, ಸಂಪಿಗೆ ಜೊತೆಗೆ ಮಿಲನ ಹೊಂದಿ ನಂತರ ಅವುಗಳನ್ನು ಬಿಟ್ಟು ಲಕ್ಕಿಯ ಹೂವಿನ ಮಿಲನಕ್ಕಾಗಿ ಬಂದಾಗ ಲಕ್ಕಿಹೂ ತನ್ನ ಅಸ್ಮಿತೆಯನ್ನು ಹೊರಹಾಕುತ್ತದೆ. ಸಂಪಿಗೆ ಹಾಗೂ ಮಲ್ಲಿಗೆ ಎರಡು ಹೂಗಳು ಪುರುಷ ಆಮಿಷಕ್ಕೆ ಬೇಗ ಒಳಗಾದರೆ ಲಕ್ಕಿ ಹೂ ಈ ಆಮಿಷಕ್ಕೆ ಬೇಗನೆ ಒಳಗಾವುದಿಲ್ಲ. ಹಲವಾರು ಪ್ರಶ್ನೆಯನ್ನು ಹಾಕುತ್ತದೆ. "ಏನ ರಾಯರು ಸವಾರಿ ಇತ್ತ ಆಗಮಿಸಿತು? ನಾನು ಅಂತ್ಯಜಳೆಂದೂ, ಹೇಸಿಯ ಮಗಳೆಂದೂ ಹೀಯಾಳಿಸುವ ನಿಮ್ಮ ಸಮಾಜ ನಿಮ್ಮನ್ನು ಹೇಗೆ ಬರಗೊಟ್ಟಿತು?"[2] ಎಂದು ಇಡೀ ಸಮಾಜವನ್ನೇ ಪ್ರಶ್ನೆ ಮಾಡುತ್ತದೆ. ಜೇನು ನೊಣವು ಇಂದಿನ ಸಮಾಜದಲ್ಲಿನ "ಕ್ರೂರಿಗಳು, ಲಾಭಬಡಕರು ಇದ್ದಾರೆ. ದೇವರ ದೃಷ್ಟಿಯಲ್ಲಿ ಅಂತ್ಯಜರು ಉತ್ತಮರು ಎಂಬ ಭೇದವೇಲ್ಲಿ? ನಾವೆಲ್ಲರೂ ಸಮಾನರು, ಸಮಾಜದ ಕಟ್ಟನ್ನು ಒಡೆದು ಬದುಕಬೇಗು"[3] ಎಂಬ ಮಾತು ಕೇಳಿದ ಲಕ್ಕಿ ಹೂ ನಾನು ನಿಮ್ಮ ಮಾತನ್ನು ನಂಬಬಹುದೇ ಎಂದು ಪ್ರಶ್ನೆ ಮಾಡಿ, ಕೊನೆಗೆ ಬಣ್ಣದ ಮಾತಿಗೆ ಒಳಗಾಗಿ ಜೇನು ನೊಣದೊಂದಿಗೆ ಮಿಲನ ಹೊಂದುತ್ತದೆ. ಇಲ್ಲಿ ಕಾಮಕ್ಕಾಗಿ ಮಾನವ ಹೆಣ್ಣನ್ನು ಬಳಿಸಿಕೊಂಡ ಪರಿ, ಸ್ತ್ರೀ ಶೋಷಣೆ, ಹಣ ದರ್ಪದಿಂದ ಸಮಾಜದಲ್ಲಿ ಮಾಡುವ ಹೇಯ ಕೃತ್ಯದ ವಿವಿಧ ಮಜುಲನ್ನು ಲೇಖಕರು ಈ ಕಥೆಯ ಮೂಲಕ ತಿಳಿಸುತ್ತಾರೆ. ಈ ಕಥೆಯಲ್ಲಿ ದಲಿತ–ಬಂಡಾಯದ ಸಂವೇದನೆಯನ್ನು ಗುರತಿಸಬಹದು.

ಸಿಂಧೂರ ಅವರ ಮೂರನೇ ಕಥೆ 'ನಾ ರಾಧೇಯ' ಈ ಒಂದು ಕಥೆಯೂ ಮಹರ್ಷಿ ವ್ಯಾಸರ ಮಹಾಭಾರತದಲ್ಲಿ ಕರ್ಣನ ಪಾತ್ರವನ್ನು ಇಟ್ಟುಕೊಂಡು ಕಥೆಯನ್ನು ರಚಿಸಲಾಗಿದೆ. ಕರ್ಣನ ಜೀವನ ವೃತ್ತಾಂತದಲ್ಲಿ ನಡೆದ ಘಟನೆಗಳನ್ನು ಕಥೆಗಳಾಗಿ ಮುಂದೆ ಸಾಗುತ್ತವೆ. ಕರ್ಣ ತನ್ನ ಬಾಲ್ಯ ಜೀವನ, ಅಂಗ ದೇಶದ ರಾಜನಾಗಿದ್ದು, ತಾಯಿ

ಮಗನಿಗೆ ತೋರುವ ಪ್ರೀತಿಯ ಕುರಿತು ತನ್ನಲ್ಲಿ ಮಾತಾಡುವ ಜೊತೆಗೆ ರಾಧೇಯ, ಕೃಷ್ಣ, ಕುಂತಿ, ದ್ರೋಣ, ಹಾಗೂ ಪರಶುರಾಮನನ್ನು ಪ್ರಶ್ನಿಸುವ ಮೂಲಕ ಕಥೆ ಸಂಭಾಷಣೆ ಮುಂದುವರಿಯುತ್ತದೆ. ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಂಡರೆ ಅನೇಕ ಪ್ರಶ್ನೆಗಳಿಗೆ ಉತ್ತರವೇ ಸಿಗುವುದಿಲ್ಲ. ಒಟ್ಟಾರೆ ಈ ಕಥೆಯೂ ನಾಟಕೀಯ ರೂಪದಲ್ಲಿ ಮುಂದೆ ಸಾಗುತ್ತದೆ.

'ನಾ ರಾಧೇಯ' ಎಂಬ ಕಥೆಯಲ್ಲಿ ಕರ್ಣ ಜೀವನ ವೃತ್ತಾಂತದಲ್ಲಿ ಸಂಭವಿಸಿರುವ ದುರಂತಗಳನ್ನು ಲೇಖಕರು ಕರ್ಣನಾಗಿ ಒಂದೊಂದು ಪ್ರಶ್ನೆ ಮಾಡುತ್ತಾ ಸಾಗುತ್ತಾರೆ. ಕಾನೀನ ಶಿಶುವಿಗೆ ಜೌರಸ ಪುತ್ರನಷ್ಟೇ ಮರ್ಯಾದೆ ಇದ್ದಾಗಲೂ ಕುಂತಿದೇವಿ ಮಗುವನ್ನು ನದಿಯಲ್ಲಿ ಏಕೆ ಬಿಟ್ಟಳು? ಭಯ ಭೀತಳಾಗಿಯೋ, ಮರ್ಯಾದೆಗೆ ಅಂಜಿಯೊ, ಇಲ್ಲ ಕುಟುಂಬದ ಗೌರವ ಕಾಪಾಡಿಕೊಳ್ಳುವ ಉದ್ದೇಶದಿಂದಲ್ಲೋ ಎಂಬ ಪ್ರಶ್ನೆ ಎದುರಾಗುತ್ತದೆ. ಮುಂದುವರಿದು ಭೋಜರಾಜನ ರಾಜ್ಯದಲ್ಲಿ ಅತಿರಥ ಇರುವರು ಕುರುರಾಜ್ಯದಲ್ಲಿ ಗಂಗಾನದಿಯಿದೆ, ಆ ಶಿಶು ತೇಲಿ ಬಂದು ಅತಿರಥನಿಗೆ ದೊರೆತದ್ದು ಹೇಗೆ? ಕೃಷ್ಣ ಮತ್ತು ಕರ್ಣನ ಜೀವನದಲ್ಲಿ ಕೆಲವು ಸಾಮ್ಯತೆಗಳು ಕಂಡು ಬರುತ್ತವೆ. ಕೃಷ್ಣ ಹುಟ್ಟಿದ್ದು ಕ್ಷತ್ರಿಯರಲ್ಲಿ ಬೆಳೆದದ್ದು ಗೌಳಿಯರ ಮನೆಯಲ್ಲಿ, ಅವನಿಗೇಕೆ ಜಾತಿ ಸೂತಕ ಅಂಟಲಿಲ್ಲ. ಕರ್ಣನ ತಾಯಿ ಕೃಷ್ಣನ ಸೋದರತ್ತೆ ಅವಳು ಕರ್ಣನನ್ನು ಹೆತ್ತದ್ದು ದೇವ ಪುರುಷ ಸೂರ್ಯನಿಂದ, ಅವನು ಬೆಳೆದದ್ದು ಅಂಬಿಗರ ಮನೆಯಲ್ಲಿ ಇವಗೇಕೆ ಸೂತಪುತ್ರ ಇಂತಹ ಜಾತಿ, ಧರ್ಮ, ನೀತಿ ನೆಲೆಯಿಂದಾಗಿ ಕರ್ಣನನ್ನು ಮರಣಕ್ಕೆ ನೂಕೂತ್ತವೆ. ಆತನ ವ್ಯಕ್ತಿತ್ವ, ಆತನ ದಾನ ಗುಣ ಆತನನ್ನು ಎತ್ತರದ ಸ್ಥಾನಕ್ಕೆ ನಿಲ್ಲಿಸುತ್ತವೆ. ಯಾವ ಆಸೆ ಆಮಿಷಗಳಿಗೆ ಒಳಗಾಗದೆ ತನ್ನ ನಂಬಿದವರಿಗಾಗಿ ಕೊನೆಯವರೆಗೆ ನಿಷ್ಠನಾಗಿ ಉಳಿದ ಪ್ರಸಂಗವನ್ನು ವಿವರಿಸುತ್ತಾರೆ. ಕರ್ಣ ತನ್ನನ್ನು ತಾನು ಕಂಡಾಗ, ಅವನ ಸುತ್ತಲಿನ ಜಗತ್ತು ಹೇಗೆ ತೋರುತ್ತದೆ ಎಂಬ ವಿಷಯವನ್ನು ನಾ ರಾಧೇಯ ಕಥೆ ತಿಳಿಸುತ್ತದೆ. ಇಲ್ಲಿ ಕರ್ಣ ತನ್ನನ್ನು ತಾನು ಹಲವು ಮುಖಗಳಿಂದ ಪ್ರಶ್ನಿಸಿಕೊಳುತ್ತಾನೆ ಹಾಗೂ ಹಲವರನ್ನು ಪ್ರಶ್ನಿಸುತ್ತಾನೆ. ಈ ಕಥೆಯಲ್ಲಿ ಕರ್ಣನೆ ಕಥೆಯ ನಾಯಕ. ಕಥೆಯ ಅನುಗುಣವಾಗಿ ರಾಧೇಯ, ಅತಿರಥ, ಕೃಷ್ಣ, ಕುಂತಿ, ದ್ರೋಣಚಾರ್ಯರ, ಪರುಶುರಾಮ, ಅರ್ಜುನ, ಭೀಮ, ಶಲ್ಯ ಪಾತ್ರಗಳನ್ನು ಒಳಗೊಂಡಿದೆ.

ಕಥೆ ಹೇಳುವೆ ಎನ್ನ ಕಥೆಗಳಲ್ಲಿ ಐತಿಹಾಸಿಕ ಸ್ಥಳಗಳನ್ನು ಅರ್ಥೈಸಲು ಅನೂಕೂಲವಾಗಿವೆ. ಗ್ರಾಮೀಣ ಸೊಗಡಿನ ಕಥಾ ಶೈಲಿ, ಪದಗಳ ಬಳಕೆ ಹಾಗೂ ಕಥೆಯನ್ನು ಸಾಗಿಸಿಕೊಂಡು ಹೋಗುವ ಚಾಕಚಕ್ಯತೆ ಕೂತೂಹಲ ಮೂಡಿಸುತ್ತದೆ. ಈ ಕೃತಿಯು ಎಂಟು ಕಥೆಗಳನ್ನು ಒಳಗೊಂಡಿದೆ ಈ ಕಥೆಗಳಲ್ಲಿ ಇತಿಹಾಸ ಕುರುಹುಗಳನ್ನು ನೋಡಿಕೊಂಡು ಚರಿತ್ರೆ ಬರೆಯುವುದು ಒಂದು ಬಗೆಯಾದರೆ, ಇತಿಹಾಸದ ನೈಜತೆಗಳನ್ನು ಸ್ಪಷ್ಟವಾಗಿ ಅರಿತು ವಾಸ್ತವಿಕತೆಗೆ ತಕ್ಕಂತೆ ಕಥಾ ರೂಪದಲ್ಲಿ ನೀಡಿದ್ದಾರೆ. ಈ ಎಂಟು ಕಥೆಗಳು ಸೌಹಾರ್ದತೆ, ದೇಶಾಭಿಮಾನ ಹಾಗೂ ವಿವಿಧ ಮೌಲ್ಯಗಳನ್ನು ತಿಳಿಸುತ್ತವೆ.

ಲೇಖಕರು ಕಿತ್ತೂರು ಪ್ರವಾಸ ಕೈಗೊಂಡಾಗ ಕೋಟೆಯಲ್ಲಿ ವಿಶ್ರಾಂತಿ ಪಡೆಯುವಾಗ ಕಥೆಯು ಆರಂಭವಾಗುತ್ತದೆ. ಒಂದು ಕಾಲದಲ್ಲಿ ಭವ್ಯವಾದ ಚರಿತ್ರೆಯನ್ನು ಹೊಂದಿದ ಕಿತ್ತೂರು, ಈಗ ಅನಾಥವಾಗಿರುವು ಕಂಡು ಲೇಖಕರು ಇತಿಹಾಸದ ಘಟನೆಗಳನ್ನು ಮನದಲ್ಲಿ ನೆನೆಯುತ್ತಾರೆ. 1585ರಲ್ಲಿ ಕಿತ್ತೂರು ದೇಸಗತಿಯ ಚರಿತ್ರೆ ಆರಂಭವಾಗುತ್ತದೆ. ಅಲ್ಲಪ್ಪ ಗೌಡರಿಂದ ಸ್ಥಾಪನೆಯಾದ ಕಿತ್ತೂರು ಅನೇಕ ರಾಜರು ತಮ್ಮ ಪ್ರಭುತ್ವವನ್ನು ಸಾಧಿಸಲು ನಿರಂತರ ಪ್ರಯತ್ನ ಮಾಡುತ್ತಿದರು. ಪೂರ್ವಕ್ಕೆ ಮೊಘಲರು, ದಕ್ಷಿಣಕ್ಕೆ ಟಿಪ್ಪು, ಉತ್ತರಕ್ಕೆ ಮರಾಠರು, ಹೊಂಚ ಹಾಕಿ ಸಂಚಿನಲ್ಲಿದರು. ಇದಕ್ಕೆ ಕಾರಣ ಕಿತ್ತೂರು

ಸಂಪದ್ಭರಿತ ನಾಡಾಗಿತ್ತು ಎಂಬ ಕಾರಣಕ್ಕಾಗಿ. ದೇಸಾಯವರಿಂದ ರಾಣಿ ಚನ್ನಮ್ಮನಿಗೆ ಅಧಿಕಾರವು ಬಳುವಳಿಯಾಗಿ ಬಂದ ನಂತರ 23 ಅಕ್ಟೋಬರ್ 1824ರಲ್ಲಿ ಬ್ರಿಟಿಷ ಅಧಿಕಾರಿ ಥ್ಯಾಕರೆ ಕಿತ್ತೂರು ಕೋಟೆಗೆ ಮುತ್ತಿಗೆ ಹಾಕಿದ ಸಂದರ್ಭದಲ್ಲಿ ಚನ್ನಮ್ಮಾಜಿ ಯುದ್ಧ ಮಾಡುವ ಮೂಲಕ ಸಾಹಸದ ಘಟನೆಗಳು ಚನ್ನಮ್ಮನ ಧೈರ್ಯವನ್ನು ಈ ಕಥೆ ತಿಳಿಸುತ್ತದೆ. ಮಲ್ಲಪ್ಪ ಶೆಟ್ಟಿಯ ದೇಶದ್ರೋಹಿ ಕೆಲಸವು ಅವನತಿಯನ್ನು ವಿವರವಾಗಿ ಪರಿಚಯಿಸಿದ್ದಾರೆ. ಮೂರನೇ ಕಥೆಯೂ 'ಶನಿವಾರ ವಾಡೆ' ಒಂದನೇ ಬಾಜಿರಾಯನ ಮನೋಭಿಲಾಷೆ, ಒಮ್ಮೆಯಾದರೂ ದಿಲ್ಲಿಯನ್ನು ಜಯಸಬೇಕೆಂಬ ಹಠ. ದಿಲ್ಲಿ ಸಿಂಹಾಸನವು ಮರಾಠರ ವ್ಯಾಪ್ತಿಗೆ ಒಳಪಡಿಸಬೇಕೆಂಬ ಹಂಬಲ ಮತ್ತು ಶನಿವಾರ ವಾಡೆ ಹೆಸರು ಕೇಳಿದರೆ ದಿಲ್ಲಿಯ ಮೊಗಲರ ಸಿಂಹಾಸನವು ಕಂಪಣದ ಬಗ್ಗೆ ಬೆಳಕು ಚೆಲ್ಲುತ್ತದೆ.

'ಕಥೆ ಹೇಳುವೆ ಎನ್ನ' ಕಥಾ ಸಾಹಿತ್ಯದಲ್ಲಿ ಮಾಸ್ತಿಯಂಥವರ ಕಥೆಗಳು ಹಳೆಯ ಅಂಶಗಳನ್ನು ಒಳಗೊಂಡ ಕಲಾತ್ಮಕತೆಯನ್ನು ಹೊಂದಿ ಜೀವಂತವಾದವು ಸದಾಶಿವ, ರಾಘವರು ಹಿಂದೆಯೆ ಕಥೆಗಳನ್ನು ಬರೆದರು. ಅವರ ಕಥೆಗಳ ಜೀವಂತಿಕೆಯನ್ನು ಪಡೆದದ್ದು ನವ್ಯದ ಮಾರ್ಗದಿಂದ ಈ ಎರಡು ಮಾರ್ಗದಿಂದ ಭಿನ್ನವಾಗಿದೆ ಕಥೆ ಹೇಳುವೆ ಎನ್ನ ಕಥಾ ಸಂಕಲನವು ಕಥೆಗಳ ವಸ್ತು ಹಳೆಯದೆನಿಸಿದರೂ ಶೈಲಿ, ಮಧ್ಯ ಮಾರ್ಗದ್ದು, ವಿಚಾರವು ಪ್ರಗತಿಯು ನವ್ಯ ಕಾಲಘಟ್ಟಕ್ಕೆ ಸಮೀಪವಾಗಿದೆ. ಎಂಟು ಕಥೆಗಳು ಬೇರೆಯವರ ಕೈಯಲ್ಲಿ ಕಥೆಯಾಗಿ, ಕವಿತೆಯಾಗಿ, ಕಾದಂಬರಿಯಾಗಿ, ಲಾವಣಿಯಾಗಿ, ಚಾರಿತ್ರಿಕ ಗ್ರಂಥಗಳಾಗಿ ನಾನಾ ವಿಧದಲ್ಲಿ ಮೂಡಿ ಬಂದಿವೆ. ಆದರೆ ಇಲ್ಲಿ ಹೇಳುವ ಕಥೆಯ ರೀತಿ ಪದ ಪ್ರಯೋಗ, ಕಥೆ ಸಾಗಿಕೊಂಡು ಹೋಗುವ ಶೈಲಿ ಭಿನ್ನವಾಗಿದೆ. ಲೇಖಕರು ತಾವೂ ಪ್ರವಾಸಿ ಸ್ಥಳಕ್ಕೆ ಭೇಟಿ ನೀಡಿದಾಗ ಅಲ್ಲಿಯ ಅನುಭವಗಳನ್ನು ಹಾಗೂ ಕಥೆಯ ವಸ್ತುವನ್ನು ಇರಿಸಿಕೊಂಡು ಭಿನ್ನವಾಗಿ ಹೇಳುತ್ತಾರೆ. ಎಲ್ಲ ಕಥೆಗಳು ಲೇಖಕರು ಕೋಟೆ ನೋಡಲು ಹೋದಾಗ, ನಿರೂಪಕರು ಅಲ್ಲಿಗೆ ತಲುಪಿದಾಗ ಎಂಬ ನುಡಿಯೊಂದಿಗೆ ಕಥೆ ಆರಂಭವಾಗುವುದು. ಕೊನೆಗೆ ಕಥಾ ನಾಯಕ ಅಥವಾ ನಾಯಕಿ ಮರಣದೊಂದಿಗೆ ಕಥೆ ಕೊನೆಗೊಳುವುದು.

ಹೀಗೆ ಮನುಷ್ಯನ ಭಾವನೆಗಳನ್ನು ವ್ಯಕ್ತಪಡಿಸುವುದೆ ಭಾಷೆಯಾಗಿದೆ. ಸಿಂಧೂರರ ಕಥೆಗಳಲ್ಲಿ ಭಾಷೆಯ ಸ್ವರೂಪವನ್ನು ಅವಲೋಕಿಸಿದಾಗ ಸಿಂಧೂರರು ಜಮಖಂಡಿ ಹಾಗೂ ಅಥಣಿ ಪ್ರದೇಶದ ಭಾಷೆಯನ್ನು ಬಳಸಿಕೊಂಡಿದ್ದಾರೆ. ಓದುಗರಿಗೆ ತಿಳಿಯುವ ಹಾಗೆ ಆ ಪ್ರದೇಶ ಸರಳ ಭಾಷೆಯನ್ನು, ಭಾಷಿಕ ಸ್ವರೂಪವು ಕಂಡು ಬರುತ್ತದೆ. ಬಳಕೆಯಾದ ಭಾಷೆಯಲ್ಲಿ ರೂಪಕಗಳಿಂದ ಗ್ರಾಮ್ಯ ಹಾಗೂ ಮರಾಠಿ ಭಾಷೆಯನ್ನು ಹೆಚ್ಚಾಗಿ ಬಳಸಿರುವುದನ್ನು ಕಾಣಬಹುದು. ಹಾಗೆಯೇ ಭಾಷಿಕ ಅಂಶಗಳನ್ನು ಕಥೆಗಳ ಸಂದರ್ಭಕ್ಕೆ ಅನುಸಾರವಾಗಿ, ವಸ್ತುವಿಷಯಗಳಿಗೆ ಪೂರಕವಾಗಿ ಕಥೆಗಳಲ್ಲಿ ಬಳಸಿರುವುದನ್ನು ಕಾಣಬಹುದು

ಕೊನೆಟಿಪ್ಪಣಿಗಳು

1. ಲಕ್ಷ್ಮೀನಾರಾಯಣ ಭಟ್ಟ, ಎನ್.ಎಸ್. (2019). *ಕನ್ನಡ ಸಾಹಿತ್ಯ ಚರಿತ್ರೆ ಪ್ರಾಚೀನ–ಆಧುನಿಕ.* ಪುಟ. 313.
2. ಸಿಂಧೂರ, ಎಮ್.ಎಸ್. (2009). ಉರುಳುವ ಕಲ್ಲು, ಪುಟ. 9
3. ಅದೇ. ಪುಟ.9

ಪರಾಮರ್ಶನ ಗ್ರಂಥಗಳು

- ಅಮೂರ ಜಿ.ಎಸ್. (2001). *ಕನ್ನಡ ಕಥನ ಸಾಹಿತ್ಯ.* ಸಪ್ನ ಬುಕ್‌ಹೌಸ್.
- ಅಮೂರ ಜಿ.ಎಸ್. (2016). *ಕನ್ನಡ ಕಥನ ಸಾಹಿತ್ಯ: ಕಾಂದಬರಿ.* ಸಪ್ನ ಬುಕ್‌ಹೌಸ್.

- ಕೋದಂಡರಾಮ. ಎನ್.ಕೆ. (1996). *ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ*. ರೂಪ ಪ್ರಕಾಶನ.
- ಲಕ್ಷ್ಮೀನಾರಾಯಣ ಭಟ್ಟ ಎನ್.ಎಸ್. (2019). *ಕನ್ನಡ ಸಾಹಿತ್ಯ ಚರಿತ್ರೆ ಪ್ರಾಚೀನ – ಆಧುನಿಕ*. ಅಂಕಿತ ಪುಸ್ತಕ.
- ಶೇಷಗಿರಿ ರಾವ್, ಎಲ್.ಎಸ್. (2015). *ಹೊಸಗನ್ನಡ ಸಾಹಿತ್ಯ ಚರಿತ್ರೆ*. ಅಂಕಿತ ಪುಸ್ತಕ.
- ಸಿಂಧೂರ ಎಮ್.ಎಸ್. (2009). *ಉರುಳುವ ಕಲ್ಲು*. ಸಿಂಧೂರ ಪ್ರಕಾಶನ.
- ಸಿಂಧೂರ ಎಮ್.ಎಸ್. (2017). *ಕಥೆ ಹೇಳುವೆ ಎನ್ನ*. ಸಿಂಧೂರ ಪ್ರಕಾಶನ.